ಕಟ್ಟುಕತೆಯೆಂಬುದನ್ನು ಸಾಬೀತು ಮಾಡುತ್ತಾ ಮಂಡಿಸಿದ ತರ್ಕಬದ್ಧ ವಾದಗಳು ಹೀಗಿದ್ದವು:

1. ಕರಿ ಕೋಣೆಯಲ್ಲಿ ಕೊಲ್ಲಲ್ಪಟ್ಟರೆಂದು ಹೇಳಲಾದ 140 ಜನ ಆ ಕಾಲದಲ್ಲಿ ಇಂಡಿಯಾಕ್ಕೆ ಬಂದಿರಲಿಲ್ಲ.

2. ಆಗ ಇಂಡಿಯಾಕ್ಕೆ ಬಂದ ಬ್ರಿಟಿಷ್ ಪ್ರಜೆಗಳ ಪಟ್ಟಿಯಲ್ಲಿ ಈ ಜನರ ಹೆಸರುಗಳೇ ಇರಲಿಲ್ಲ.

3. ಕಲಕತ್ತಾದ ಆ ಕರಿಕೋಣೆಯಲ್ಲಿ ಜನರನ್ನು ಎಷ್ಟೇ ತುರುಕಿದರೂ ಅದರಲ್ಲಿ 140 ಜನ ಹಿಡಿಯುವ ಸಾಧ್ಯತೆಯೇ ಇರಲಿಲ್ಲ!

ಬ್ರಿಟಿಷ್ ಪರ ಇತಿಹಾಸ ಲೇಖನದ ಈ ಸುಳ್ಳನ್ನು ಮುಂದೆ 1940ನೆಯ ಇಸವಿಯ ಸುಮಾರಿಗೆ ಸ್ವಾತಂತ್ರ್ಯ ಚಳುವಳಿಯ ಕ್ರಾಂತಿಕಾರಿ ನಾಯಕ ಸುಭಾಷ್‌ಚಂದ್ರ ಬೋಸ್ ಕೂಡ ಪ್ರಶ್ನಿಸಿದರು; ಹದಿನಾರು ವರ್ಷದ ಹುಡುಗ ಲೋಹಿಯಾ ಇದನ್ನು 1926ರಲ್ಲೇ ಪ್ರಶ್ನಿಸಿದ್ದರು!

ಇದೇ ಪುಸ್ತಕದಲ್ಲಿ ಶಿವಾಜಿಯೊಬ್ಬ 'ಲೂಟಿಕೋರ ನಾಯಕ' ಎಂಬ ವರ್ಣನೆಯಿತ್ತು. ಈ ವರ್ಣನೆಯ ಹುರುಳನ್ನು ಪರೀಕ್ಷಿಸಲು ಇಂಡೋ ಪರ್ಷಿಯನ್ ಚರಿತ್ರಕಾರ ಖಾಫೀಖಾನ್ ಮುಘಲ್ ಸಾಮ್ರಾಜ್ಯ ಹಾಗೂ ಆ ಸುತ್ತಣ ಕಾಲಘಟ್ಟ ಕುರಿತು ಬರೆದ 'ಮುಂತಖಾಬ್ ಅಲ್ ಲುಬಾಬ್' ಪುಸ್ತಕದ ವಿವರಗಳನ್ನು ಲೋಹಿಯಾ ಓದಿದರು. ಅದರ ಆಧಾರದ ಮೇಲೆ ಶಿವಾಜಿ ಕುರಿತು ತಮ್ಮ ತರಗತಿಯ ಪಠ್ಯದಲ್ಲಿ ಕೊಟ್ಟಿರುವ ವಿವರಗಳು ಸುಳ್ಳು ಎಂದು ದಾಖಲೆ ಸಮೇತ ತೋರಿಸಿ ಹೇಳಿದರು: 'ನಮ್ಮ ತರಗತಿಯ ಇತಿಹಾಸದ ಪುಸ್ತಕದಲ್ಲಿ ಬರೆದಿರುವಂತೆ ಶಿವಾಜಿ ಮಹಿಳೆಯರಿಗೆ ಅಗೌರವ ತೋರುತ್ತಿರಲಿಲ್ಲ. ಮಸೀದಿಗಳನ್ನು ಕೆಡವಿರಲಿಲ್ಲ. ಪವಿತ್ರ ಕುರಾನ್ ಗ್ರಂಥದ ಪ್ರತಿಗಳನ್ನು ಶಿವಾಜಿ ಮುಸ್ಲಿಮರಿಗೆ ಹಿಂತಿರುಗಿಸಿದ.' ಹೀಗೆ ಓದಿ ತೋರಿಸಿದ ವಿದ್ಯಾರ್ಥಿ ಲೋಹಿಯಾ, 'ಬ್ರಿಟಿಷರು ಬರೆದ ಹಾಗೂ ಬ್ರಿಟಿಷರ ಪರ ಬರೆಯಲಾದ ಚರಿತ್ರೆಯ ಪುಸ್ತಕಗಳೆಲ್ಲ ಪರಿಷ್ಕರಣಕ್ಕೆ ಒಳಗಾಗಬೇಕು' ಎಂದು ಹೇಳುವಷ್ಟು ಪ್ರಬುದ್ಧರಾಗಿದ್ದರು.

'ಈ ವಿಚಾರಗಳನ್ನೆಲ್ಲ ಎಲ್ಲಿ ತಿಳಿದುಕೊಂಡೆ? ಪೇಪರ್ ಓದಿ ತಿಳಿದುಕೊಂಡೆಯಾ?' ಎಂದರು ಮೇಷ್ಟ್ರು.

'ಪೇಪರ್‌ನಲ್ಲೇನಿದ್ದರೂ ನ್ಯೂಸ್ ಬರುತ್ತೆ ಅಷ್ಟೆ, ವಿಚಾರಗಳಲ್ಲ!' ಎಂದರು ಲೋಹಿಯಾ.

ಇದಾದ ಮೂವತ್ತು ವರ್ಷಗಳ ನಂತರ ತಾವು ಸಂಪಾದಿಸುತ್ತಿದ್ದ 'ಮ್ಯಾನ್‌ಕೈಂಡ್' ಮಾಸಪತ್ರಿಕೆಯಲ್ಲಿ ಚರಿತ್ರೆ ಕುರಿತ ದೇಶಿ ಹಾಗೂ ವಿದೇಶಿ ಲೇಖಕರ ಪುಸ್ತಕಗಳನ್ನು ವಿಮರ್ಶಿಸುತ್ತಾ ಲೋಹಿಯಾ ಬರೆದ ಮಾತು: 'ಇಂಥ ಸುಳ್ಳು ಇತಿಹಾಸ ಓದುವ ಇಂಡಿಯಾದ ಮಕ್ಕಳು ತಮ್ಮ ದೇಶದ ಬಗೆಗೆ ಆತ್ಮವಿಶ್ವಾಸವನ್ನೇ ಕಳೆದುಕೊಳ್ಳುತ್ತಾರೆ. ಈ ಮಕ್ಕಳು ದೊಡ್ಡವರಾದ ಮೇಲೆ ಕೂಡ ಅವರಿಗೆ ಹಳೆಯ ಓದಿನ ನೆನಪು ಅಳಿಸಿಹೋಗದೆ ಅದು ಅವರ ಮನಸ್ಸಿನ ಮೇಲೆ ಪರಿಣಾಮ ಬೀರುತ್ತಿರುತ್ತದೆ. ಇತಿಹಾಸದ ಇಂಥ ಸುಳ್ಳುಗಳು ಮತ್ತೆ ಮತ್ತೆ ಪುನರಾವರ್ತನೆಯಾಗಿ ಭವಿಷ್ಯದಲ್ಲಿ ಭಾಗಶಃ ಸತ್ಯಗಳೇ ಆಗಿ ಉಳಿದುಬಿಡುತ್ತವೆ.'

ಭಾರತದ ಚರಿತ್ರಕಾರರು ಬರೆದ ಸುಳ್ಳು ಹಾಗೂ ಉತ್ಪ್ರೇಕ್ಷೆಗಳನ್ನು ಕೂಡ ಲೋಹಿಯಾ ತೀವ್ರವಾಗಿ ಟೀಕಿಸುತ್ತಿದ್ದರು. ವಿದ್ಯಾರ್ಥಿ ದೆಸೆಯಲ್ಲಿ ಇತಿಹಾಸ ಪಠ್ಯಗಳ ಬಗ್ಗೆ ಲೋಹಿಯಾರಲ್ಲಿ ಮೊಳೆತ ಪರೀಕ್ಷಕ ನೋಟ ಮುಂದೊಮ್ಮೆ ಪ್ರಬುದ್ಧವಾದ ಪಾಂಡಿತ್ಯಪೂರ್ಣ ಸಂಶೋಧಕ ನೋಟವಾಯಿತು. ಈ ನೋಟ ಮುಂದೆ ಅವರು 'ಮ್ಯಾನ್‌ಕೈಂಡ್' ಮಾಸಪತ್ರಿಕೆಯಲ್ಲಿ ಇತಿಹಾಸ ಪುಸ್ತಕಗಳನ್ನು ಕುರಿತು 'ಮೆಳ್ಳೆಗಣ್ಣಿನ ಇತಿಹಾಸಕಾರರು' ಶೀರ್ಷಿಕೆಯಡಿ ಬರೆದ ವಿಮರ್ಶೆಗಳಲ್ಲಿರುವ ಗಂಭೀರ ವಿಶ್ಲೇಷಣೆಗಳಿಗೆ ನಾಂದಿ ಹಾಡಿತು.

ಹರೆಯದಲ್ಲಿ ಕೊಂಚ ದುರ್ಬಲವಾದ ಮೈಕಟ್ಟಿನ ಹುಡುಗನಾಗಿದ್ದ ಲೋಹಿಯಾ ಚಿನ್ನದ ಫ್ರೇಮಿನ ಕನ್ನಡಕ ಹಾಕುತ್ತಿದ್ದರು. ಗಂಭೀರ ವಿಷಯಗಳ ಬಗ್ಗೆ ತರ್ಕಬದ್ಧವಾಗಿ ವಾದಿಸಿ ಕೇಳುಗರ ಮನ ಗೆಲ್ಲುತ್ತಿದ್ದ ಅವರಿಗೆ ತಮ್ಮ ಸಹಪಾಠಿಗಳಿಂದ ಹಿಡಿದು ಹಿರಿಯ ವಿದ್ಯಾರ್ಥಿಗಳವರೆಗೂ ಹಲವು ವಯಸ್ಸಿನ ಗೆಳೆಯರಿದ್ದರು. ಖಾದಿ ಕುರಿತು ಗಾಂಧೀಜಿಯವರ ಚಿಂತನೆ ಹಾಗೂ ಖಾದಿ ಪ್ರಚಾರದಿಂದ ಪ್ರಭಾವಿತರಾಗಿದ್ದ ಲೋಹಿಯಾ ಖಾದಿ ತೊಡಲು ಶುರು ಮಾಡಿದ್ದರು. ಅಷ್ಟೊತ್ತಿಗಾಗಲೇ ಬ್ರಿಟಿಷ್ ಸರ್ಕಾರದ ಆರ್ಥಿಕ ನೀತಿಗಳು ಭಾರತದ ನೇಕಾರರ ಬೆರಳುಗಳನ್ನು ಕತ್ತರಿಸಿ ಹಾಕಿದ್ದನ್ನು, ಗ್ರಾಮೀಣ ಆರ್ಥಿಕತೆಯ ಬೆನ್ನೆಲುಬು ಮುರಿದಿದ್ದನ್ನು ಗಾಂಧೀಜಿ ಎತ್ತಿ ತೋರಿಸಿದ್ದರು; ಖಾದಿ ತಯಾರಿಕೆ ಹಾಗೂ ಖಾದಿ ಮಾರಾಟವನ್ನು ಬ್ರಿಟಿಷರ ವಿರುದ್ಧದ ವ್ಯಾಪಕ ಕಾರ್ಯಕ್ರಮವನ್ನಾಗಿ ರೂಪಿಸಲಾರಂಭಿಸಿದ್ದರು. ಲೋಹಿಯಾ ಕೂಡ ಖಾದಿ ತೊಡುವುದು ಬ್ರಿಟಿಷ್ ಆಡಳಿತದ ವಿರುದ್ಧದ ಬಂಡಾಯದ ಭಾಗವೆಂಬುದನ್ನು ದೃಢವಾಗಿ ನಂಬಿದ್ದರು. ಒಂದು ದಿನ 'ಖಾದಿಯಿಂದ ಸ್ವರಾಜ್ಯ ಸಿಗಬಲ್ಲದೆ?' ಎಂಬ ಚರ್ಚೆ ನಡೆಯುತ್ತಿತ್ತು. ಲೋಹಿಯಾ ಆ ಚರ್ಚೆಯಲ್ಲಿ ಖಾದಿ ತೊಡುವುದು ಆರ್ಥಿಕವಾಗಿ ಲಾಭಕರ ಎಂದು ಎಷ್ಟು ಚೆನ್ನಾಗಿ ವಾದಿಸಿದರೆಂದರೆ, ಅವರ ಪ್ರೊಫೆಸರೊಬ್ಬರು ಕೂಡ ಖಾದಿ ತೊಡಲು ಶುರು ಮಾಡಿದರು!

ಕಾಲೇಜಿನ ಪಠ್ಯಪುಸ್ತಕಗಳನ್ನು ಬಿಟ್ಟು ಇತರ ಪುಸ್ತಕಗಳನ್ನೇ ಹೆಚ್ಚು ಓದುತ್ತಿದ್ದ ಲೋಹಿಯಾ ರಾತ್ರಿ ಬಿಡುವಿನ ವೇಳೆಯಲ್ಲಿ ಕಾಲೇಜು ಪಠ್ಯಗಳನ್ನು ಗಟ್ಟಿಯಾಗಿ ಓದಲು ಯಾರಾದರೂ ಗೆಳೆಯರಿಗೆ ಹೇಳುತ್ತಿದ್ದರು. ಗೆಳೆಯರು ಓದುತ್ತಿದ್ದುದನ್ನು ಕೇಳಿಸಿಕೊಳ್ಳುತ್ತಿದ್ದರು. ಕಾಲೇಜಿನಲ್ಲಿ ಕೇಳಿಸಿಕೊಂಡ ಪಾಠಗಳನ್ನು ನೆನಪಿನಲ್ಲಿಟ್ಟುಕೊಳ್ಳುತ್ತಿದ್ದರು. ಅವರ ನೆನಪಿನ ಶಕ್ತಿ ಅಗಾಧವಾಗಿತ್ತು. ವಿಷಯಗಳನ್ನು ಆಳವಾಗಿ ತಿಳಿಯುವ ಕುತೂಹಲ, ಶ್ರದ್ಧೆಗಳು ಅವರಲ್ಲಿದ್ದವು. ಆದರೆ ಪರೀಕ್ಷೆಯಲ್ಲಿ ಉತ್ತರ ಬರೆದು ಅಂಕ ಗಳಿಸುವ ಬಗ್ಗೆ ಅವರು ಅಷ್ಟು ತಲೆ ಕೆಡಿಸಿಕೊಂಡವರಲ್ಲ. ಪರೀಕ್ಷೆಯಲ್ಲಿ ಉತ್ತರ ಬರೆದಾಗ ತಮ್ಮ ಸ್ವತಂತ್ರ ಅನಿಸಿಕೆಯನ್ನು ಮಂಡಿಸುವುದು ಅವರಿಗೆ ಸಹಜವಾಗಿ ಒಗ್ಗಿತ್ತು.

ಇಂಟರ್ ಪರೀಕ್ಷೆಯಲ್ಲಿ ಜಾರ್ಜ್ ಬರ್ನಾರ್ಡ್ ಶಾನ 'ಸೀಸರ್ ಅಂಡ್ ಕ್ಲಿಯೋಪಾತ್ರ' ನಾಟಕ ಕುರಿತಂತೆ 'ಈ ನಾಟಕದ ನಾಯಕ ಯಾರು?' ಎಂಬ ಪ್ರಶ್ನೆಯಿತ್ತು. ಕೆಲವರು 'ಸೀಸರ್' ಎಂದು ಉತ್ತರ ಬರೆದರು; ಇನ್ನು ಕೆಲವರು 'ಬ್ರೂಟಸ್' ಎಂದು ಬರೆದರು. ಲೋಹಿಯಾಗೆ ಅವತ್ತು ಹೊಸ ಐಡಿಯಾ ಹೊಳೆಯಿತು. 'ಈ ನಾಟಕದ ನಾಯಕ ಕ್ಯಾಶಿಯಸ್' ಎಂಬ ತಮ್ಮ ವ್ಯಾಖ್ಯಾನವನ್ನು ಅವರು ಬರೆದರು. ಈ ಹೊಸ ವ್ಯಾಖ್ಯಾನ ಓದಿ ಪ್ರೊಫೆಸರ್‌ಗಳಿಗೂ ಖುಷಿಯಾಯಿತು. ಇಷ್ಟೆಲ್ಲ ಸ್ವತಂತ್ರ ಆಲೋಚನೆಗಳಿದ್ದರೂ ಪರೀಕ್ಷೆಗಳಲ್ಲಿ ಹೆಚ್ಚು ಅಂಕ ಗಳಿಸುವ ಕಲೆ ಲೋಹಿಯಾಗೆ ದಕ್ಕಲಿಲ್ಲ. ಒಮ್ಮೆ ಲೋಹಿಯಾ ತಮ್ಮ ಹಿರಿಯ ಗೆಳೆಯ ಶುಕ್ಲಾಗೆ, 'ಅಣ್ಣಾ! ಈಗ ಓದ್ತಾ ಇರೋರೆಲ್ಲ ಐಎಎಸ್, ಐಸಿಎಸ್ ಪರೀಕ್ಷೆ ಬರೆದು ಆಫೀಸರ್ ಆಗಬೇಕೂಂತ ಇರೋರು. ಆದರೆ ನಾನೂ ನೀವೂ ಜಗತ್ತಿನ ದೊಡ್ಡ ಮನುಷ್ಯರಾಗಬೇಕಲ್ಲ!' ಎಂದು ಹೇಳಿದ್ದರು!

ಪಠ್ಯಪುಸ್ತಕಗಳಲ್ಲಿ ತಮಗೆ ಪ್ರಿಯವಾದ ವಿಷಯಗಳನ್ನು ಆರಿಸಿಕೊಂಡು ಆ ಕುರಿತ ಹೊಸ ಹೊಸ ಪುಸ್ತಕಗಳನ್ನು ಲೋಹಿಯಾ ಓದುತ್ತಿದ್ದರು. ಇಂಟರ್‌ಮೀಡಿಯೆಟ್ ತರಗತಿಯಲ್ಲಿ ಪಾಶ್ಚಾತ್ಯ ಅಥವಾ ಯೂರೋಪಿಯನ್ ತರ್ಕಶಾಸ್ತ್ರಕ್ಕೆ ಇನ್ನೂರು–ಇನ್ನೂರೈವತ್ತು ಅಂಕಗಳಿದ್ದವು; ಭಾರತೀಯ ತರ್ಕಶಾಸ್ತ್ರಕ್ಕೆ ಐವತ್ತು ಅಂಕಗಳು ಮಾತ್ರ ಇದ್ದವು. ಲೋಹಿಯಾ ಭಾರತೀಯ ತರ್ಕಶಾಸ್ತ್ರ ಕುರಿತ ಮುಖ್ಯ ಗ್ರಂಥಗಳನ್ನು ಓದಿಕೊಂಡಿದ್ದರು. ಪರೀಕ್ಷೆಯಲ್ಲಿ ಭಾರತೀಯ ತರ್ಕಶಾಸ್ತ್ರ ಕುರಿತ ಪ್ರಶ್ನೆಗಳಿಗೆ ಎರಡು ಗಂಟೆ ಕಾಲ ಉತ್ತರ ಬರೆದರು. ಉಳಿದ ಪ್ರಶ್ನೆಗಳಿಗೆ ಅವಸರವಸರವಾಗಿ ಉತ್ತರ ಬರೆದರು. ಹೀಗಾಗಿ ಯೂರೋಪಿಯನ್ ತರ್ಕಶಾಸ್ತ್ರ ಕುರಿತ ಭಾಗದಲ್ಲಿ ಎರಡು ಮೂರು ಪ್ರಶ್ನೆಗಳಿಗೆ ಉತ್ತರ ಬರೆಯುವಷ್ಟು ಹೊತ್ತಿಗೆ ವೇಳೆ ಮುಗಿಯಿತು.

ಬನಾರಸ್ ಕಾಲೇಜಿನ ಇಂಟರ್‌ಮೀಡಿಯೆಟ್ ಪರೀಕ್ಷೆಯಲ್ಲಿ ಲೋಹಿಯಾಗೆ ಮೂರನೇ ಶ್ರೇಣಿ ದೊರೆಯಿತು. ಅಷ್ಟು ಹೊತ್ತಿಗೆ ಅಪ್ಪ ಕಲಕತ್ತಾದಲ್ಲಿ ನೆಲೆಸಲು ಹೊರಟಿದ್ದರಿಂದ ಲೋಹಿಯಾ ಕೂಡ ಕಲಕತ್ತಾಕ್ಕೆ ಹೊರಟರು.

ಇಸವಿ 1927. ಕಲಕತ್ತಾ ಸ್ವಾತಂತ್ರ್ಯ ಚಳುವಳಿಯ ಕೇಂದ್ರ ಸ್ಥಾನಗಳಲ್ಲೊಂದಾಗಿತ್ತು. ಸರ್ಕಾರವನ್ನು ವಿರೋಧಿಸುತ್ತಿದ್ದ ಲೋಹಿಯಾ ಸರ್ಕಾರಿ ಕಾಲೇಜು ಸೇರಲು ಇಷ್ಟಪಡಲಿಲ್ಲ; ಹಲವು ರಾಷ್ಟ್ರೀಯವಾದಿ ಅಧ್ಯಾಪಕರುಗಳಿದ್ದ ವಿದ್ಯಾಸಾಗರ ಕಾಲೇಜು ಸೇರಿದರು. ಕಲಕತ್ತಾದಲ್ಲಿ ಕಾಲೇಜು ಸೇರಿದ ಮೇಲೂ ಶುಕ್ಲಾ ಮುಂತಾದ ಗೆಳೆಯರನ್ನು ನೋಡಲು ಲೋಹಿಯಾ ಬನಾರಸ್‌ಗೆ ಬಂದು ಹೋಗುತ್ತಿದ್ದರು.

ಹೀಗೇ ಒಂದು ರಜೆಯಲ್ಲಿ ಲೋಹಿಯಾ ಶುಕ್ಲಾ ಹಾಗೂ ಇನ್ನೊಬ್ಬ ಗೆಳೆಯನ ಜೊತೆ ಮತ್ತೆ ಸಾರನಾಥಕ್ಕೆ ಹೊರಟರು. ಯಾರ ಬಳಿಯೂ ಕಾಸಿರಲಿಲ್ಲ. ಬನಾರಸ್‌ನಿಂದ ಸಾರನಾಥಕ್ಕೆ ಹತ್ತು ಕಿಲೋಮೀಟರ್ ದೂರ. ಮೂವರು ಗೆಳೆಯರೂ ಕಾಲ್ನಡಿಗೆಯಲ್ಲೇ ಹೊರಟರು. ಆ ಕಾಲ್ನಡಿಗೆಯ ಪಯಣದಲ್ಲಿ ಗೆಳೆಯರ ಜೊತೆ ನಡೆದ